# ಕರ್ನಾಟಕ ವಿಧಾನಸಭೆ

**ಹದಿನೈದನೇ ವಿಧಾನಸಭೆ**

(ನಾಲ್ಕನೇ ಅಧಿವೇಶನ)

**ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ**

## 26ನೇ ಜುಲೈ 2019

----

**[ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು - ತೋಟಗಾರಿಕೆ ಸಚಿವರು - ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು - ಕೃಷಿ ಸಚಿವರು - ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು - ಸಹಕಾರ ಸಚಿವರುಹಾಗೂ ಸಮಾಜ ಕಲ್ಯಾಣ ಸಚಿವರು ].**

**ಒಟ್ಟು ಪ್ರಶ್ನೆಗಳು - 61**

----

15/4/1434

**ಕನಕ ಭವನ ನಿರ್ಮಾಣ**

**1260 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201617ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಮಂಜೂರಾಗಿರುವ ಕನಕ ಭವನಗಳೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)
ಆ) ಸದರಿ ಭವನಗಳ ನಿರ್ಮಾಣಕ್ಕೆ ಒದಗಿಸಲಾದ ಅನುದಾನವೆಷ್ಟು;
ಇ) ಸದರಿ ಸಮುದಾಯ ಭವನಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ;
ಈ) ಇಲ್ಲದಿದ್ದಲ್ಲಿ, ಮಂಜೂರಾತಿ ವಿಳಂಬಕ್ಕೆ ಕಾರಣಗಳೇನು?

----

15/4/1435

**ವಿವಿಧ ಯೋಜನೆಗಳಡಿ ಸಹಾಯಧನ**

**1261 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ನಿರುದ್ಯೋಗಿಗಳಿಗೆ ಜಿಲ್ಲಾಧಿಕಾರಿಗಳ ಮತ್ತು ಶಾಸಕರ ಆಯ್ಕೆ ಸಮಿತಿಯಲ್ಲಿ ವಿವಿಧ ಯೋಜನೆಗಳಡಿ ಸರ್ಕಾರದ ಸಹಾಯಧನ ಸೌಲಭ್ಯಕ್ಕಾಗಿ ಆಯ್ಕೆಯಾಗಿದ್ದವರ ಪ್ರಸ್ತಾವನೆಗಳನ್ನು ಬ್ಯಾಂಕ್‌ನಿಂದ ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಅರ್ಹ ಫಲಾನುಭವಿಗಳ ಸಾಲ ಮಂಜೂರಾತಿ ಪ್ರಸ್ತಾವನೆಗಳು ತಿರಸ್ಕೃತಗೊಂಡ ಸಂದರ್ಭದಲ್ಲಿ ಸಹಾಯಧನ/ಸೌಲಭ್ಯವಿತರಿಸಲು ಸರ್ಕಾರ ಕೈಗೊಂಡ ಕ್ರಮವೇನು?

----

15/4/1436

**ರೇಷ್ಮೆ ಹುಳು ಸಾಕಾಣಿಕೆ ಮನೆ ಹಾಗೂ ಬೆಳೆ ನಷ್ಟ ಪರಿಹಾರ**

**1262 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201617ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಮಳೆಯಿಂದಾಗಿ ಎಷ್ಟು ರೇಷ್ಮೆ ಹುಳು ಸಾಕಾಣಿಕೆ ಮನೆಗಳು ನೆಲಸಮವಾಗಿವೆ;
ಆ) ನೆಲಸಮವಾಗಿರುವ ಮನೆಗಳಿಗೆ ಹಾಗೂ ಬೆಳೆ ನಷ್ಠ ಉಂಟಾಗಿರುವ ರೈತರಿಗೆ ಪರಿಹಾರ ಧನ ವಿತರಿಸಲಾಗಿದೆಯೇ; ಇಲ್ಲಿಯವರೆಗೆ ಎಷ್ಟು ಮನೆ ನೆಲಸಮ ಮತ್ತು ಬೆಳೆ ನಷ್ಟವಾಗಿದೆ ಹಾಗೂ ವಿತರಿಸಿದ ಪರಿಹಾರ ಧನ ಎಷ್ಟು; (ವಿವರ ನೀಡುವುದು)
ಇ) ಇಲ್ಲದಿದ್ದಲ್ಲಿ, ಪರಿಹಾರಧನ ವಿತರಿಸಲು ಸರ್ಕಾರ ಯೋಜನೆ/ ನೀತಿಯನ್ನು ರೂಪಿಸಲು ಉದ್ದೇಶಿಸಿದೆಯೇ;
ಈ) ಯಾವ ಕಾಲಮಿತಿಯೊಳಗೆ ಯೋಜನೆ ರೂಪಿಸಲಾಗುವುದು?

----

15/4/1437

**ವಸತಿ ನಿಲಯಗಳ ಮಂಜೂರಾತಿ**

**1263 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಪ್ಪಳ ಜಿಲ್ಲೆಯಲ್ಲಿ ಹೊಸದಾಗಿ ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;
ಆ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಯಾವ ಗ್ರಾಮಗಳಲ್ಲಿ ಮಂಜೂರಾತಿ ನೀಡಿ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು;
ಇ) ಪ್ರಸ್ತುತ ಜಿಲ್ಲೆಯಲ್ಲಿ ಖಾಸಗಿ ಕಟ್ಟಡದಲ್ಲಿರುವ ವಸತಿ ನಿಲಯಗಳೆಷ್ಟು;ಇವುಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೇ;
ಈ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಎಷ್ಟು ಅನುದಾನ ಒದಗಿಸಲಾಗುವುದು?

----

15/4/849

**ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ**

1264 **ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಉತ್ತರ ಮತಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳೆಷ್ಟು; ಅವು ಯಾವವು;

ಆ) ಸದರಿ ವಿದ್ಯಾರ್ಥಿ ನಿಲಯಗಳು ಶಿಥಿಲಾವಸ್ಥೆಯಲ್ಲಿದ್ದು , ವಿದ್ಯಾರ್ಥಿ ನಿಲಯಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಂತಹ ವಿದ್ಯಾರ್ಥಿ ನಿಲಯಗಳ ದುರಸ್ಥಿಗೆ ಸರ್ಕಾರದ ಕ್ರಮವೇನು?

----

**15/4/850**

**ಬೆಳಗಾವಿ ಕೋಟೆ ಮತ್ತು ಕೆರೆ ಅಭಿವೃದ್ಧಿ**

1265 **ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ನಗರದ ಐತಿಹಾಸಿಕ ಕೋಟೆ ಮತ್ತು ಕೆರೆ ಪ್ರವಾಸಿಗರ ಪ್ರಮುಖ ಸ್ಥಳವಾಗಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಆ) ಬಂದಿದಲ್ಲಿ, ಈ ಎರಡು ಸ್ಥಳಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಹೆಚ್ಚಿನ ಅನುದಾನ ಬಿಡುಗಡೆಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

----

**15/4/133**

**ರೈತರಿಗೆ ಪರಿಹಾರ**

1266 **ಅಪ್ಪಚ್ಚು (ರಂಜನ್) (ಮಡಿಕೇರಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಇತ್ತೀಚಿನ ಜಲ ಪ್ರಳಯದ ಸಂದರ್ಭದಲ್ಲಿ ಕೊಡಗು ಜಿಲ್ಲೆಯಲ್ಲಿ ಎಷ್ಟು ಎಕರೆ ತೋಟಗಾರಿಕೆ ಬೆಳೆ ನಷ್ಟವಾಗಿದೆ;

ಆ) ನಷ್ಟಕ್ಕೊಳಗಾದ ರೈತರಿಗೆ ಈ ಸಂಬಂಧ ಪರಿಹಾರ ನೀಡಲಾಗಿದೆಯೇ; ಹಾಗಿಲ್ಲದಿದ್ದಲ್ಲಿ, ಪರಿಹಾರ ನೀಡಲು ಸರ್ಕಾರ ತೆಗೆದುಕೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು);

ಇ) ತೋಟಗಾರಿಕೆ ಇಲಾಖೆಯಲ್ಲಿ ಬರುವ ವಿವಿಧ ಯೋಜನೆಗಳಾವುವು; ಈ ಯೋಜನೆಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಗೊಳಿಸಿದ ಅನುದಾನವೆಷ್ಟು;

ಈ) ಮಾದಾಪುರದ ತೋಟಗಾರಿಕಾ ಕ್ಷೇತ್ರದಲ್ಲಿ ಖಾಲಿ ಇರುವ ಜಾಗವನ್ನು ಅಭಿವೃಧ್ಧಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ಪೂರ್ಣ ವಿವರ ನೀಡುವುದು)

----

**15/4/1371**

**ಸಮುದಾಯ ಭವನಗಳು**

**1267** **ಅಶ್ವಿನ್ ಕುಮಾರ್ ಎಂ. (ಟಿ. ನರಸೀಪುರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಟಿ ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನದಿಂದ ನಿರ್ಮಾಣವಾಗಿರುವ ಡಾ:ಬಿ.ಆರ್. ಅಂಬೇಡ್ಕರ್ ಭವನ, ಡಾ:ಬಾಬು ಜಗಜೀವನ್ ರಾಮ್ ಭವನ ಸೇರಿದಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನಾಂಗದವರಿಗೆ ನಿರ್ಮಿಸಿರುವ ಸಮುದಾಯ ಭವನಗಳೆಷ್ಟು; ಯಾವ ಯಾವ ಗ್ರಾಮಗಳಲ್ಲಿ ನಿರ್ಮಾಣವಾಗಿವೆ; ಎಷ್ಟು ಅನುದಾನ ಬಿಡುಗಡೆಯಾಗಿದೆ; (ಗ್ರಾಮವಾರು ವಿವರ ಒದಗಿಸುವುದು)

ಆ) ಈ ಸಮುದಾಯ ಭವನಗಳಲ್ಲಿ ಹಾಲಿ ಪೂರ್ಣವಾಗಿ ನಿರ್ಮಾಣಗೊಂಡಿರುವ ಭವನಗಳಾವುವು; ಪೂರ್ಣಗೊಂಡ ಭವನಗಳಲ್ಲಿ ಸ್ಥಳೀಯ ಸಂಸ್ಥೆ (ಗ್ರಾಮ ಪಂಚಾಯತ್, ಪುರಸಭೆ) ಗಳಿಗೆ ಹಸ್ತಾಂತರಗೊಳಿಸಿರುವ ಭವನಗಳು ಯಾವುವು; (ಗ್ರಾಮವಾರು ಮಾಹಿತಿ ಒದಗಿಸುವುದು)

ಇ) ಕಾಮಗಾರಿ ಸ್ಥಗಿತಗೊಂಡಿರುವ ಹಾಗೂ ಅಪೂರ್ಣಗೊಂಡ ಕಾಮಗಾರಿಗಳಾವುವು; ಕಾಮಗಾರಿಗಳು ಸ್ಥಗಿತ / ಅಪೂರ್ಣಗೊಳ್ಳಲು ಕಾರಣಗಳೇನು; ಅಪೂಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಕಾಮಗಾರಿವಾರು ಮಾಹಿತಿ ಒದಗಿಸುವುದು)

ಈ) ಹಾಲಿಪ್ರಗತಿಯಲ್ಲಿರುವ ಭವನಗಳಾವುವು; (ಗ್ರಾಮವಾರು ಮಾಹಿತಿ ಒದಗಿಸುವುದು)

ಉ) ಹಾಲಿ ಸರ್ಕಾರದಿಂದ ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗ್ರಾಮ ಹಂತದಲ್ಲಿ ಭವನಗಳನ್ನು ನಿರ್ಮಾಣ ಮಾಡಲು ಸರ್ಕಾರ ನಿಗಧಿಪಡಿಸಿರುವ ಮೊತ್ತ (ಅನುದಾನ)ದಿಂದ ಭವನಗಳ ನಿರ್ಮಾಣ ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;ಬಂದಿದ್ದಲ್ಲಿ, ಇದಕ್ಕೆ ಪರಿಹಾರ ಕ್ರಮಗಳೇನು?

----

15/4/1376

**ಅನುದಾನ ಬಿಡುಗಡೆ**

**1268** **ಅಶ್ವಿನ್ ಕುಮಾರ್ ಎಂ. (ಟಿ. ನರಸೀಪುರ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಟಿ.ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನದಿಂದ ನಿರ್ಮಾಣವಾಗಿರುವ ಕನಕ ಭವನ, ಒಕ್ಕಲಿಗರ ಸಮುದಾಯ ಭವನ, ಉಪ್ಪಾರ ಸಮುದಾಯ ಭವನ ಸೇರಿದಂತೆ ಇತರೇ ಹಿಂದುಳಿದ ವರ್ಗಗಳ ಜನಾಂಗದವರಿಗೆ ನಿರ್ಮಾಣ ಮಾಡಿರುವ ಭವನಗಳೆಷ್ಟು; ಯಾವ ಯಾವ ಗ್ರಾಮಗಳಲ್ಲಿ ನಿರ್ಮಾಣವಾಗಿದೆ; ಎಷ್ಟು ಅನುದಾನ ಬಿಡುಗಡೆಯಾಗಿದೆ; (ಗ್ರಾಮವಾರು ವಿವರ ಒದಗಿಸುವುದು)

ಆ) ಸದರಿ ಸಮುದಾಯ ಭವನಗಳಲ್ಲಿ ಹಾಲಿ ಪೂರ್ಣವಾಗಿ ನಿರ್ಮಾಣಗೊಂಡಿರುವ ಭವನಗಳು ಯಾವುವು; ಪೂರ್ಣಗೊಂಡ ಭವನಗಳಲ್ಲಿ ಸ್ಥಳೀಯ ಸಂಸ್ಥೆ (ಗ್ರಾಮ ಪಂಚಾಯತ್, ಪುರಸಭೆ) ಗಳಿಗೆ ಹಸ್ತಾಂತರಗೊಳಿಸಿರುವ ಭವನಗಳಾವುವು; (ಗ್ರಾಮವಾರು ಮಾಹಿತಿ ಒದಗಿಸುವುದು)

ಇ) ಸ್ಥಗಿತಗೊಂಡಿರುವ ಹಾಗೂ ಅಪೂರ್ಣಗೊಂಡ ಕಾಮಗಾರಿಗಳಾವುವು; ಕಾಮಗಾರಿಗಳು ಸ್ಥಗಿತ/ ಅಪೂರ್ಣಗೊಳ್ಳಲು ಕಾರಣವೇನು; ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಕಾಮಗಾರಿವಾರು ಮಾಹಿತಿ ಒದಗಿಸುವುದು)

ಈ) ಹಾಲಿ ಪ್ರಗತಿಯಲ್ಲಿರುವಭವನಗಳು ಯಾವುವು; (ಗ್ರಾಮವಾರು ಮಾಹಿತಿ ನೀಡುವುದು)

ಉ) ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗ್ರಾಮ ಹಂತದಲ್ಲಿ ಭವನಗಳನ್ನು ನಿರ್ಮಾಣ ಮಾಡಲು ಸರ್ಕಾರ ನಿಗದಿಪಡಿಸಿರುವ ಮೊತ್ತದಿಂದ ಭವನಗಳ ನಿರ್ಮಾಣ ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಪರಿಹಾರದ ಕ್ರಮಗಳೇನು?

----

15/4/1368

**ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಪ್ರಗತಿ**

**1269 ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ : -

ಅ) ರಾಜ್ಯದಲ್ಲಿರುವ ಒಟ್ಟು ವಸತಿ ನಿಲಯಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಮಾಹಿತಿ ನೀಡುವುದು)
ಆ) ಸದರಿ ವಸತಿ ನಿಲಯಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಸದರಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲ ಮಾಡಿಕೊಡುವಂತಹ ವಾತಾವರಣ ನಿರ್ಮಾಣ ಮಾಡಲು ಇಲಾಖೆಯು ಕೈಗೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)
ಇ) ಕಳೆದ 3 ವರ್ಷಗಳಲ್ಲಿ ವಿವಿಧ ರ್‍ಯಾಂಕ್‌ಗಳಲ್ಲಿ ಸಾಧನೆಮಾಡಿದ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಸದರಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸರ್ಕಾರವು ಯಾವ ರೀತಿಯ ಪ್ರೋತ್ಸಾಹ ನೀಡುತ್ತಿದೆ; (ವಿದ್ಯಾರ್ಥಿಗಳ ಹೆಸರು ಮತ್ತು ಪಡೆದ ರ್‍ಯಾಂಕ್‌ನ ಸಹಿತ ವಿವರವಾದ ಮಾಹಿತಿ ನೀಡುವುದು)
ಈ) ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಜ್ಞಾನವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮತ್ತು ಅವರ ಪ್ರಗತಿಗಾಗಿ ವಿಶೇಷ ತರಬೇತಿ ಶಿಬಿರ/ಶಾಲೆಗಳನ್ನು ನಡೆಸಲಾಗುತ್ತಿದೆಯೇ;
ಉ) ಹಾಗಿದ್ದಲ್ಲಿ, ಇದರಿಂದ ಪ್ರಯೋಜನ ಪಡೆದುಕೊಂಡ ವಿದ್ಯಾರ್ಥಿಗಳೆಷ್ಟು? (ಹೆಸರು ಮತ್ತು ಅವರ ಪ್ರಗತಿಯ ಬಗ್ಗೆಮಾಹಿತಿ ಒದಗಿಸುವುದು)

----

15/4/1369

**ಸಸ್ಯಗಾರ ಮತ್ತು ಫಾರ್ಮುಗಳು**

**1270 ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ : -

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ಅಧೀನದಲ್ಲಿರುವ ತೋಟಗಾರಿಕೆ, ಸಸ್ಯಗಾರ ಮತ್ತು ಫಾರ್ಮುಗಳ ಸಂಖ್ಯೆ ಎಷ್ಟು; ಅವುಗಳ ವಿಸ್ತೀರ್ಣವೆಷ್ಟು; (ಸಂಪೂರ್ಣ ವಿವರ ನೀಡುವುದು)
ಆ) ಇಲಾಖೆಯ ಅಧೀನದಲ್ಲಿರುವ ತೋಟಗಾರಿಕೆ ಸಸ್ಯಗಾರ ಮತ್ತು ಫಾರ್ಮುಗಳಲ್ಲಿ ಇರುವ ತಾಯಿ ಮರಗಳ ಸಂಖ್ಯೆ ಎಷ್ಟು; ಅವುಗಳಿಂದ ಎಷ್ಟು ಸಸಿಗಳನ್ನು ಕಸಿ ಮಾಡಿ ತಯಾರಿಸಲಾಗಿದೆ; (ವಿವರ ನೀಡುವುದು)
ಇ) ಕಳೆದ 3 ವರ್ಷಗಳಲ್ಲಿ ಯಾವ ಯಾವ ತಳಿಯ ಸಸಿಗಳನ್ನು ತಯಾರಿಸಲಾಗಿದೆ; ಸದರಿ ಸಸಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಸಸಿಗಳನ್ನು ವಿತರಿಸಲಾಗಿದೆ; (ಸಸಿಗಳ ತಳಿಗಳನ್ನೊಳಗೊಂಡಂತೆ ವರ್ಷವಾರು ಮಾಹಿತಿ ನೀಡುವುದು)
ಈ) ಸಸಿಗಳನ್ನು ತಯಾರಿಸಲು ಆಗುತ್ತಿರುವ ವೆಚ್ಚದ ಮೊತ್ತವೆಷ್ಟು; ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಅವರಿಗೆ ಆಗುತ್ತಿರುವ ವೆಚ್ಚವೆಷ್ಟು; ಸಸಿಗಳ ಮಾರಾಟದಿಂದ ಬರುವ ಆದಾಯವೆಷ್ಟು; (ವಿವರವಾದ ಮಾಹಿತಿ ಒದಗಿಸುವುದು)
ಉ) ರಾಜ್ಯದಲ್ಲಿರುವ ಖಾಸಗಿ ಸಸ್ಯಾಗಾರಗಳೆಷ್ಟು; ಇವುಗಳ ಕಾರ್ಯನಿಷ್ಠೆಯ ಬಗ್ಗೆ ಸರ್ಕಾರ

ಯಾವಕ್ರಮಗಳನ್ನು ಕೈಗೊಂಡಿದೆ ಮತ್ತು ಇಲಾಖೆಯ ಯೋಜನೆಗಳಿಗೆ ಯಾರಿಂದ ಎಷ್ಟು ಸಸಿಗಳನ್ನು ಖರೀದಿಸಲಾಗಿದೆ; (ವಿವರವಾದ ಮಾಹಿತಿ ನೀಡುವುದು)
ಊ) ಸಸ್ಯಗಾರದಲ್ಲಿ ಸಸಿಗಳನ್ನು ತಯಾರಿಸಿದ್ದಲ್ಲಿ, ಹೊರ ಗುತ್ತಿಗೆದಾರರಿಂದ ಸಸಿಗಳನ್ನು ಖರೀದಿಸಲು ಇರುವ ಮಾನದಂಡಗಳೇನು; ಸದರಿ ಮಾನದಂಡಗಳನ್ನು ಇಲಾಖೆಯು ಪಾಲಿಸುತ್ತಿದೆಯೇ; (ಮಾಹಿತಿ ನೀಡುವುದು)
ಋ) ಸಸ್ಯ ಸಂತೆ ಹಾಗೂ ಇತರೆ ಯೋಜನೆಗಳಿಗಾಗಿ ಖಾಸಗಿ ಸಸ್ಯಗಾರರಿಂದ ಸಸಿಗಳನ್ನು ಖರೀದಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ಮತ್ತು ಇದರಿಂದ ಇಲಾಖೆಯ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತಿದೆ? (ಸಂಪೂಣವಾದ ಮಾಹಿತಿ ನೀಡುವುದು)

----

**15/4/844**

**ಫಸಲ್ ವಿಮೆ ಯೋಜನೆಯಡಿ ವಿಮಾ ಕಂತು ಪಾವತಿಸಲು ಬಾಕಿಯಿರುವ ಪ್ರಕರಣಗಳು**

**1271 ಬಸವರಾಜ್ ಬೊಮ್ಮಾಯಿ (ಶಿಗ್ಗಾಂವ್):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಫಸಲ್ ವಿಮೆ ಯೋಜನೆಯಡಿ ರೈತರ ವಿಮಾ ಕಂತು ಪಾವತಿಸಲು ಬಾಕಿ ಇರುವ ಪ್ರಕರಣಗಳೆಷ್ಟು (ಜಿಲ್ಲಾವಾರು ವಿವರ ಒದಗಿಸುವುದು);
ಆ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸುವ ಮಾನದಂಡಗಳೇನು; ರೈತರು ತುಂಬಬೇಕಾದ ಮೊತ್ತ ಹಾಗೂ ಯಾವ ಬೆಳೆಗೆ ಎಷ್ಟು ಕಂತು ಪಾವತಿಸಬೇಕಾಗಿದೆ;
ಇ) ಈ ನಿಟ್ಟಿನಲ್ಲಿ ಬೆಳೆ ಸಮೀಕ್ಷೆಯನ್ನು ಯಾವ ಆಧಾರದಲ್ಲಿ ಪರಿಗಣಿಸಲಾಗುವುದು; ಬೆಳೆ ಮಾಹಿತಿ ನಿಖರವಾಗಿ ಪಡೆಯಲು ಸರ್ಕಾರ ಯಾವ ನಿರ್ಧಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ?

----

**15/4/853**

**ಅಡಿಕೆ ಬೆಳೆ ಹಾನಿ**

**1272 ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆ ಬೆಳೆಯಲಾಗುತ್ತಿದೆ (ಜಿಲ್ಲಾವಾರು ಮಾಹಿತಿ ನೀಡುವುದು)
ಆ) ವಿಪರೀತ ಬಿಸಿಲಿನಿಂದಾಗಿ ಅಡಿಕೆ ಬೆಳೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ; ಬೆಳೆ ಹಾನಿಯಿಂದ ಉಂಟಾಗಿರುವ ನಷ್ಟ ಎಷ್ಟು; (ಸಂಪೂರ್ಣ ವಿವರ ನೀಡುವುದು)
ಇ) ಬೆಳೆ ಹಾನಿಗೊಳಗಾದ ರೈತರಿಗೆ ಸರ್ಕಾರ ಪರಿಹಾರ ನೀಡಿದೆಯೇ; ಎಷ್ಟು ಜನ ರೈತರಿಗೆ ಎಷ್ಟು ಮೊತ್ತದ ಪರಿಹಾರ ನೀಡಲಾಗಿದೆ?

----

**15/4/854**

## ರೈತರ ಆತ್ಮಹತ್ಯೆ

1273 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 2015 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);
ಆ) ಆತ್ಮಹತ್ಯೆ ಮಾಡಿಕೊಂಡವರ ಪೈಕಿ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಹಾಗೂ ಬಾಕಿ ಇದೆ; ಬಾಕಿ ಇರಲು ಕಾರಣವೇನು; ಎಷ್ಟು ರೈತರ ಮನವಿ ತಿರಸ್ಕರಿಸಲಾಗಿದೆ; (ಕಾರಣ ಸಹಿತ ವಿವರವನ್ನು ಜಿಲ್ಲಾವಾರು ಪ್ರತ್ಯೇಕವಾಗಿ ಒದಗಿಸುವುದು)
ಇ) ರೈತರಿಗೆ ಪರಿಹಾರ ಮೊತ್ತವನ್ನು ಪಾವತಿಸುವುದರ ಜೊತೆಗೆ ಮೃತರ ವಾರಸುದಾರರಿಗೆ ಯಾವ ಸೌಲಭ್ಯವನ್ನು ಕಲ್ಪಿಸಲಾಗಿದೆ? (ವಿವರಗಳನ್ನು ಒದಗಿಸುವುದು)

----

15/4/856

## ಕೃಷಿ ಜಮೀನುಗಳ ನಾಶ

1274 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೊಡಗು ಜಿಲ್ಲೆಯಲ್ಲಿ ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಬಿದ್ದ ಭಾರೀ ಮಳೆಯಿಂದ ಕಾಫಿ ಸೇರಿದಂತೆ ಕೃಷಿ ಜಮೀನುಗಳು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಎಷ್ಟು ಎಕರೆ ಕಾಫಿ ಮತ್ತು ಕೃಷಿ ಜಮೀನುಗಳು ನಾಶವಾಗಿವೆ; (ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)
ಇ) ಪರಿಹಾರಕ್ಕಾಗಿ ಎಷ್ಟು ಜನರು ಅರ್ಜಿ ಸಲ್ಲಿಸಿದ್ದಾರೆ; ಅಂದಾಜಿಸಿದ ಕೃಷಿ ಭೂಮಿ ಮತ್ತು ಫಸಲಿನ ನಷ್ಟವೆಷ್ಟು; ಇದುವರೆಗೂ ಎಷ್ಟು ಜನರಿಗೆ ಪರಿಹಾರ ವಿತರಿಸಲಾಗಿದೆ? (ಗ್ರಾಮವಾರು ವಿವರಗಳನ್ನು ನೀಡುವುದು)

----

15/4/857

## ಸಾಲಮನ್ನಾ

1275 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಋಣ ಪರಿಹಾರ ಆಯೋಗವನ್ನು ಸ್ಥಾಪಿಸಲು ಉದ್ದೇಶಿಸಿದೆಯೇ; ಬ್ಯಾಂಕುಗಳಿಂದ ಆಗುವ ಕಿರುಕುಳಗಳನ್ನು ತಪ್ಪಿಸಲು ಸಹಾಯವಾಗುವಂತೆ ಸರ್ಕಾರ ಕೈಗೊಂಡ ಕ್ರಮವೇನು;
ಆ) ಈ ಯೋಜನೆ ಯಾವಾಗಿನಿಂದ ಜಾರಿಗೆ ಬರುತ್ತದೆ, ಸರ್ಕಾರ ಮಾಡಿದ ಘೋಷಣೆಯಂತೆ ಸಕಾಲಕ್ಕೆ ಸಾಲದ ಬಾಬ್ತು ಹಣವನ್ನು ಬಿಡುಗಡೆ ಮಾಡದಿರುವಾಗ ಸದರಿ ಯೋಜನೆಯಿಂದ ರೈತರಿಗೆ ಯಾವುದೇ ಪ್ರಯೋಜನವಾಗದ್ದಿರುವುದು ನಿಜವೇ;

ಇ) ಸರ್ಕಾರ ರೈತರ ಸಾಲವನ್ನು ಹಂತ ಹಂತವಾಗಿ ಪಾವತಿ ಮಾಡುತ್ತಿರುವುದಾಗಿ ಘೋಷಿಸಿದ್ದು ಯಾವ ಯಾವ ಅವದಿಯಲ್ಲಿ ಎಷ್ಟು ಮೊತ್ತದ ಸಾಲ ಮನ್ನಾ ಹಣ ಬಿಡುಗಡೆಗೊಳಿಸಲಾಗಿದೆ;

ಈ) ಬಾಕಿ ಇರುವ ಮೊತ್ತವನ್ನು ಬಿಡುಗಡೆ ಮಾಡಲು ಕಾಲ ಮಿತಿಯನ್ನು ಹಾಕಿಕೊಳ್ಳಲಾಗಿದೆಯೇ;

ಉ) ಋಣ ಪರಿಹಾರ ಆಯೋಗದ ಮುಖಾಂತರ ಹೇಗೆ ಮುಕ್ತ ಮಾಡಲಾಗುತ್ತದೆ; ತಾಂತ್ರಿಕ/ಕಾನೂನು ತೊಂದರೆಗಳು ಬರುವ ಆತಂಕ ಸರ್ಕಾರಕ್ಕೆ ಇಲ್ಲವೆ? (ವಿವರಗಳನ್ನು ಒದಗಿಸುವುದು)

----

15/4/1430

**ತೋಟಗಾರಿಕಾ ಬೆಳೆಗಳಿಗೆ ಪರಿಹಾರ**

1276 **ಎಂ. ಚಂದ್ರಪ್ಪ (ಹೊಳಲ್ಕೆರೆ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಳೆದ ಮೂರು ವರ್ಷಗಳಿಂದ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರವು ಬರಗಾಲಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಎಕರೆಯಲ್ಲಿ ಅಡಿಕೆ, ತೆಂಗು, ಮಾವು ಇನ್ನಿತರೆ ತೋಟಗಾರಿಕೆ ಬೆಳೆಗಳು ಒಣಗಿ ಹೋಗಿವೆ; (ಮಾಹಿತಿ ನೀಡುವುದು)

ಇ) ಸದರಿ ಒಣಗುತ್ತಿರುವ ಬೆಳೆಗಳಿಗೆ ಪರಿಹಾರ ನೀಡಲಾಗುವುದೇ; ಪರಿಹಾರ ನೀಡಲು ಸರ್ವೇ ಕಾರ್ಯ ನಡೆದಿದೆಯೇ; (ಸಂಪೂರ್ಣ ವಿವರ ನೀಡುವುದು)

ಈ) ತೋಟಗಾರಿಕೆ ಬೆಳೆಗಳಿಗೆ ಈ ವರ್ಷ ಚಿತ್ರದುರ್ಗ ಜಿಲ್ಲೆಗೆ ವಿಶೇಷವಾದ ಪ್ಯಾಕೇಜ್‌ನ್ನು ನೀಡಲಾಗುವುದೇ?

----

15/4/250

**ಪಶು ಚಿಕಿತ್ಸಾಲಯಗಳು**

1277 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಯಾವ ಹಂತದಲ್ಲಿದೆ;

ಆ) ಚೆನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಬೇಡಿಕೆ ಬಂದಿವೆ;

ಇ) ಸದರಿ ಬೇಡಿಕೆಗಳ ಕುರಿತಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಹೊಸ ಸರ್ಕಾರಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಆರಂಭಿಸಲು ಸರ್ಕಾರದ ನಿಯಮಗಳೇನು;

ಉ) ಚೆನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಗ್ರಾಮಗಳಲ್ಲಿ ಹೊಸದಾಗಿ ಪ್ರಾಥಮಿಕ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಬೇಡಿಕೆ ಬಂದಿವೆ; ಈ ಬಗ್ಗೆ ಸರ್ಕಾರದ ಕ್ರಮವೇನು?

----

15/4/851

**ಯಾತ್ರಿ ನಿವಾಸ**

**1278 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಿಂದ ದೇವಾಲಯಗಳಿಗೆ ಯಾತ್ರಿ ನಿವಾಸ ಮಂಜೂರು ನೀಡಲಾಗಿರುವ ವಿಧಾನ ಸಭಾ ಕ್ಷೇತ್ರಗಳಾವುವು;
ಆ) ಕಳೆದ ಮೂರು ವರ್ಷಗಳಿಂದ ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾವ ದೇವಸ್ಥಾನಗಳಿಗೆ ಯಾತ್ರಿ ನಿವಾಸ ಮಂಜೂರಾತಿಗೆ ಬೇಡಿಕೆ ಸಲ್ಲಿಸಲಾಗಿದೆ; ಬೇಡಿಕೆಗನುಗುಣವಾಗಿ ಮಂಜೂರು ಮಾಡಲಾಗುವುದೇ;
ಇ) ಈ ಬಗ್ಗೆ ಅನುದಾನ ನೀಡಿಕೆಯಲ್ಲಿ ತಾರತಮ್ಯವಾಗಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ತಾರತಮ್ಯ ಸರಿಪಡಿಸಿ ಚನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ದೇವಸ್ಥಾನಗಳಿಗೆ ಯಾತ್ರಿ ನಿವಾಸ ಮಂಜೂರಾತಿಗೆ ಅನುದಾನ ನೀಡಲು ಸರ್ಕಾರದ ಕ್ರಮವೇನು?

----

**15/4/852**

## ಮೂಲಭೂತ ಸೌಕರ್ಯ

**1279 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪ್ರವಾಸೋದ್ಯಮ ಇಲಾಖೆಯ ಯೋಜನೆಗಳಾವುವು; (ಯೋಜನೆಯ ವಿವರ ನೀಡುವುದು)
ಆ) ಕಿತ್ತೂರು ಕೋಟೆ ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕಳೆದ ಮೂರು ವರ್ಷಗಳಿಂದ ಎಷ್ಟು ಅನುದಾನ ನೀಡಿದೆ; (ವರ್ಷವಾರು ಅನುದಾನ ನೀಡಿರುವ ವಿವರ ನೀಡುವುದು)
ಇ) ನೀಡಿರುವ ಅನುದಾನದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳೇನು;
ಈ) ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಯಾವ ಕ್ರಮ ಕೈಗೊಂಡಿದೆ ಹಾಗೂ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು?

----

**15/4/871**

## ರೈತರ ಸಾಲಮನ್ನಾ ಯೋಜನೆ

**1280 ಗೂಳಿಹಟ್ಟಿ ಬಿ. ಶೇಖರ್ (ಹೊಸದುರ್ಗ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಇದುವರೆಗೆ ರೈತರ ಸಾಲಮನ್ನಾ ಯೋಜನೆಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಬಿಡುಗಡೆಯಾದ ಮೊತ್ತವೆಷ್ಟು;
ಆ) ಸಹಕಾರ ಸಂಘಗಳ ಮುಖಾಂತರ ಬಿಡುಗಡೆಯಾದ ಮೊತ್ತವೆಷ್ಟು; ಇನ್ನು ಎಷ್ಟು ಬಾಕಿ ಇದೆ; ಯಾವಾಗ ಪೂರ್ಣ ಪ್ರಮಾಣದಲ್ಲಿ ರೈತರ ಸಾಲ ಮನ್ನಾಕ್ಕಾಗಿ ಹಣ ಬಿಡುಗಡೆ ಮಾಡಲಾಗುವುದು?

----

15/4/860

## ಗಂಗಾ ಕಲ್ಯಾಣ ಯೋಜನೆ

1281 **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)
ಆ) ಪ್ರತಿ ಕೊಳವೆ ಬಾವಿ ಕೊರೆಯಲು ಆಗಿರುವ ವೆಚ್ಚ ಎಷ್ಟು; ಕೊಳವೆ ಬಾವಿ ಕೊರೆಯಲು ಟೆಂಡರ್ ಕರೆಯಲಾಗಿರುತ್ತದೆಯೇ; ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತವೆಷ್ಟು; ಯಾವ ಸಂಸ್ಥೆಗೆ ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ; (ಪೂರ್ಣ ಮಾಹಿತಿ ನೀಡುವುದು)
ಇ) ಸದರಿ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲು ಅನುಸರಿಸುವ ಮಾನದಂಡಗಳೇನು; ನೈಜ ಫಲಾನುಭವಿಗಳಿಗೆ ಯೋಜನೆ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)
ಈ) ಕೊಳವೆ ಬಾವಿ ಕೊರೆಯುವುದು, ನೀರೆತ್ತುವ ಪಂಪ್, ಪೈಪ್ ಅಳವಡಿಸುವುದು, ವಿದ್ಯುತ್ ಅಳವಡಿಕೆ ಹೀಗೆ ಪ್ರತಿ ಹಂತದಲ್ಲೂ ಅಕ್ರಮ ನಡೆಯುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದಕ್ಕೆ ಕಡಿವಾಣ ಹಾಕಲು ಕೈಗೊಂಡಿರುವ ಕ್ರಮಗಳೇನು;
ಉ) ಕೊರೆಯಲಾಗಿರುವ ಎಲ್ಲಾ ಕೊಳವೆ ಬಾವಿಗಳು ಯಶಸ್ವಿಗೊಂಡಿವೆಯೇ; ಎಷ್ಟು ಕೊಳವೆಬಾವಿಗಳು ವಿಫಲವಾಗಿವೆ; (ಜಿಲ್ಲಾವಾರು ವಿವರ ನೀಡುವುದು)
ಊ) ಕೊರೆಯಲಾದ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

----

15/4/862

## ಜಾನುವಾರುಗಳ ಮಾರಾಟ

1282 **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ರೈತರು ಸಾಕಿರುವ ಜಾನುವಾರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)
ಆ) ಬರಗಾಲಕ್ಕೆ ತುತ್ತಾಗಿ ರೈತರು ಜಾನುವಾರುಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ರೈತರ ಜೀವನೋಪಾಯದ ಸಂಪತ್ತಾದ ಜಾನುವಾರುಗಳನ್ನು ಉಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;
ಈ) 2017-18 ಮತ್ತು 2018-19ನೇ ಸಾಲಿನಲ್ಲಿ ಸರ್ಕಾರ ಜಾನುವಾರುಗಳನ್ನು ಉಳಿಸಲು ಖರ್ಚು ಮಾಡಿದ ಮೊತ್ತವೆಷ್ಟು?

----

15/4/863

## ಪರಿಶಿಷ್ಟ ಜಾತಿ/ ಪರಿಶಿಷ್ಟ ಜನಾಂಗದ ಯೋಜನೆಗಳು

1283 **ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಜನಾಂಗದ ಬಡವರ ಕಲ್ಯಾಣಕ್ಕಾಗಿ ಹಾಕಿಕೊಂಡಿರುವ ಯೋಜನೆಗಳಾವುವು;
ಆ) 2017-18 ರಿಂದ 2019-20ನೇ ಸಾಲಿನವರೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನಾಂಗದವರ ಕಲ್ಯಾಣಕ್ಕಾಗಿ ನಿಗಧಿಪಡಿಸಿದ ಗುರಿ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)
ಇ) ಈ ಯೋಜನೆಗಳಿಗೆ ನಿಗಧಿಪಡಿಸಿದ ಅನುದಾನವೆಷ್ಟು; ಖರ್ಚಾದ ಹಾಗೂ ಬಾಕಿ ಉಳಿದ ಅನುದಾನವೆಷ್ಟು?

----

15/4/1215

**ಬಾವಿ ಮತ್ತು ಕೊಳವೆ ಬಾವಿಗಳ ವಿಫಲತೆ**

**1284 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕೃಷಿ ಭೂಮಿಗೆ ನೀರುಣಿಸಲು ವೈಯಕ್ತಿಕ ಬಾವಿ ಯೋಜನೆಯಡಿ ತೆರೆದ ಬಾವಿ/ಕೊಳವೆ ಬಾವಿ / ತೋಡಿ ಅದರಲ್ಲಿ ನೀರು ಬಾರದೇ ವಿಫಲವಾದಲ್ಲಿ, ಅದೇ ಫಲಾನುಭವಿಗೆ ಬೇರೊಂದು ಯೋಜನೆಯಲ್ಲಿ ತೆರೆದ ಬಾವಿ/ ಕೊಳವೆ ಬಾವಿ ನಿರ್ಮಿಸಲು ಈಗಿರುವ ನಿಯಮಾವಳಿಗಳ ಪ್ರಕಾರ ಅವಕಾಶ ಇಲ್ಲದಿರುವುದರಿಂದ ಫಲಾನುಭವಿಗಳು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ ಸದರಿ ಫಲಾನುಭವಿಗಳಿಗೆ ಕೊಳವೆ ಬಾವಿ ತೆರೆದ ಬಾವಿ ನಿರ್ಮಿಸಲು ಬೇರೊಂದು ಯೋಜನೆಯಲ್ಲಿ ಅವಕಾಶ ಕಲ್ಪಿಸಲು ನಿಯಮಾವಳಿ ರೂಪಿಸಲಾಗುವುದೇ?

----

15/4/858

**ವಸತಿ ಶಾಲೆಗಳಲ್ಲಿನ ಪ್ರವೇಶಾತಿ**

**1285 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮೊರಾರ್ಜಿ ದೇಸಾಯಿ/ ರಾಣಿ ಚೆನ್ನಮ್ಮಾ/ ಅಟಲ ಬಿಹಾರಿ ವಾಜಪೇಯಿ/ ನವೋದಯ ಮಾದರಿ/ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ನಿಗಧಿಪಡಿಸಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಬೆಳಗಾವಿ ಜಿಲ್ಲೆಯ ಶಾಲಾವಾರು ಮಾಹಿತಿ ನೀಡುವುದು)
ಆ) ಪ್ರವೇಶಾತಿಗೆ ಇರುವ ಮಾನದಂಡಗಳೇನು;
ಇ) ಸದರಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಶಾಸಕರು ಶಿಫಾರಸ್ಸು ಮಾಡಿದಾಗ ಪ್ರವೇಶ ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ, ವಿವರ ನೀಡುವುದು;
ಈ) ಸದರಿ ವಸತಿ ಶಾಲೆಗಳಲ್ಲಿ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಂಡಿದೆಯೇ;
ಉ) ಕೈಗೊಂಡಿದ್ದಲ್ಲಿ, ಪ್ರವೇಶಾತಿಗೆ ಎಷ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ?

----

15/4/967

## ಫಸಲ್ ಭೀಮಾ ಯೋಜನೆ

**1286 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ರೈತರು ಕಟ್ಟಿದ ವಿಮಾ ಕಂತಿನ ಹಣವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);
ಆ) ಇಲ್ಲಿಯವರೆಗೆ ರೈತರಿಗೆ ಮಂಜೂರು ಮಾಡಿದ ವಿಮಾ ಹಣವೆಷ್ಟು ( ಮತಕ್ಷೇತ್ರವಾರು ಮಾಹಿತಿ ನೀಡುವುದು);
ಇ) ಫಸಲ್ ಭೀಮಾ ಯೋಜನೆಯು ರಾಜ್ಯದ ಕೆಲವೊಂದು ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಬಂದಿದ್ದಲ್ಲಿ, ರೈತರಿಗೆ ವಿಮೆ ಹಣವನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

----

15/4/22

## ಮಕ್ಕಳಿಗೆ ಪ್ರವೇಶ

**1287 ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಗಧಿತ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅನುಪಾತದಲ್ಲಿ ಮಕ್ಕಳು ಪ್ರವೇಶ ಪಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಅನುಪಾತದಲ್ಲಿ ಕೊರತೆಯಾದಲ್ಲಿ ಅದಲು ಬದಲು ಮಾಡಲು ಸರ್ಕಾರಕ್ಕಿರುವ ತೊಂದರೆಯೇನು?

----

15/4/1080

## ಪ್ರವಾಸೋದ್ಯಮ ಕೇಂದ್ರಗಳು

**1288 ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಇಲಾಖೆ ಗುರುತಿಸಿರುವ ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳು ಯಾವುವು;
ಆ) ಇವುಗಳ ಅಭಿವೃದ್ಧಿಗೆ ನಿಗಧಿಪಡಿಸಿದ ಅನುದಾನವೆಷ್ಟು;
ಇ) ಶ್ರೀ ಶಿರಡಿ ಸಾಯಿಬಾಬಾ ಮಂದಿರ ಇಲ್ಲಿಗೆ ಆಧ್ಯತೆ ನೀಡಲು ಪ್ರಮುಖ ಅಂಶವೇನು; ನೀಡಿರುವ ಅನುದಾನವೆಷ್ಟು;
ಈ) ಪ್ರವಾಸೋದ್ಯಮ ಅಲ್ಲದೆ ಈ ಟ್ರಸ್ಟ್‌ಗೆ ಇತರೆ ಇಲಾಖೆಯಿಂದ ನೀಡಿರುವ ಅನುದಾನವೆಷ್ಟು?

----

15/4/1300

## ಅಕ್ರಮವಾಗಿ ಜಾಗ ಒತ್ತುವರಿ

1289 **ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಂಗಳೂರು ನಗರದ (ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ) ಮಾಗಡಿ ಮುಖ್ಯ ರಸ್ತೆಯ ಹೌಸಿಂಗ್ ಬೋರ್ಡ್, ಕೆ.ಹೆಚ್.ಬಿ ಕಾಲೋನಿ ಬಳಿಯಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ (ಕಾರ್ಯಗಾರ) ಜಾಗದಲ್ಲಿ ಪ್ರಸ್ತುತ ಖಾಸಗಿ ಸಹಭಾಗಿತ್ವದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಮೀನು ಮಾರಾಟ ಮಹಾಮಂಡಲ(ನಿ) ಮೈಸೂರು ವತಿಯಿಂದ ಮೀನು ಮಾರಾಟ ಕೇಂದ್ರವಿದ್ದು, ಸದರಿ ಮಳಿಗೆಗೆ ಎಷ್ಟು ಅಡಿ ಜಾಗ ಮಂಜೂರಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);
ಆ) ಮಂಜೂರಾಗಿರುವ ಜಾಗದಲ್ಲಿ ಅಕ್ರಮವಾಗಿ ಜಾಗ ಒತ್ತುವರಿ ಮಾಡಿ ಮೀನು ಮಾರಾಟ ಮಾಡಲು ಪರಿವಾನಿಗೆ ಪಡೆದಿದ್ದು, ಮೀನು ಮಾರಾಟ ಮಾಡುವುದರ ಜೊತೆಗೆ ಅಕ್ರಮವಾಗಿ ಕೋಳಿ ಮಾಂಸದ ಹೋಟೆಲ್ ಮತ್ತು ಮದ್ಯ ಸರಬರಾಜು ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಸದರಿಯವರಿಗೆ ಜಾಗ ಮಂಜೂರಾತಿ ಮಾಡಲು ಇರುವ ಮಾನದಂಡ ಮತ್ತು ನಿಯಮಾವಳಿಗಳೇನು;
ಈ) ಸದರಿಯವರು ಮೀನು ಮಾರಾಟದ ಜೊತೆಗೆ ಮಾಂಸದ ಹೋಟೆಲ್ ನಡೆಸಲು ಅನುಮತಿಪಡೆಯದೆ ಅಕ್ರಮವಾಗಿ ಸರ್ಕಾರಿ ಜಾಗದಲ್ಲಿ ಹೋಟೆಲ್ ಮತ್ತು ಮದ್ಯ ಸರಬರಾಜು ಮಾಡುತ್ತಿರುವುದು ಕಾನೂನು ಬಾಹಿರವಾಗಿದ್ದು, ಇದಕ್ಕೆ ನೀಡಿರುವ ಜಾಗ ರದ್ದು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

15/4/1439

## ಹಿಂದುಳಿದ ವರ್ಗಗಳ ಸಮುದಾಯ ಭವನ

1290 **ಎಲ್. ನಾಗೇಂದ್ರ (ಚಾಮರಾಜ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಯಾವ ಯಾವ ಸಮುದಾಯಕ್ಕೆ ಸೇರಿದ ಭವನಗಳಿವೆ; (ವಿವರ ಒದಗಿಸುವುದು)
ಆ) ಕಳೆದ 3 ವರ್ಷಗಳಲ್ಲಿ ಇಂತಹ ಸಮುದಾಯ ಭವನಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಯಾವ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆ; (ವಿವರ ಒದಗಿಸುವುದು)
ಇ) ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಇಲಾಖಾ ವತಿಯಿಂದ ಸಮುದಾಯ ಭವನಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ ಅವು ಯಾವುವು? (ವಿವರ ಒದಗಿಸುವುದು)

----

15/4/1440

## ಸಮುದಾಯ ಭವನಗಳು

1291 **ಎಲ್. ನಾಗೇಂದ್ರ (ಚಾಮರಾಜ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಯಾವ ಯಾವ ಜನಾಂಗಕ್ಕೆ ಸೇರಿದ ಸಮುದಾಯ ಭವನಗಳಿವೆ; (ವಿವರ ಒದಗಿಸುವುದು)
ಆ) ಕಳೆದ 3 ವರ್ಷಗಳಲ್ಲಿ ಈ ಸಮುದಾಯ ಭವನಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ; ಯಾವ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆ; (ವಿವರ ಒದಗಿಸುವುದು)
ಇ) ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಸಮುದಾಯ ಭವನಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ಅವು ಯಾವುವು? (ವಿವರ ಒದಗಿಸುವುದು)

----

15/4/868

**ಪಶುಭಾಗ್ಯ ಯೋಜನೆ**

**1292 ನಿಸರ್ಗನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ದೇವನಹಳ್ಳಿ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕೃಷಿ ಪತ್ತಿನ ಸಹಕಾರಿ ಬ್ಯಾಂಕುಗಳು ಪಶುಭಾಗ್ಯ ಯೋಜನೆಯಡಿ ಸಾಲ ಸೌಲಭ್ಯ ಮಂಜೂರಾತಿ ನೀಡಿವೆ;
ಆ) ಮಂಜೂರಾತಿ ನೀಡಿರುವ ಸಾಲದ ಪ್ರಮಾಣ ಎಷ್ಟು; ಪಶುಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಸರ್ಕಾರದಿಂದ ಬಂದಿರುವ ಸಹಾಯಧನ ಎಷ್ಟು; (ಪೂರ್ಣ ಮಾಹಿತಿ ನೀಡುವುದು)
ಇ) ಹಾಗಿದ್ದಲ್ಲಿ, ಮಂಜೂರಾತಿಯಾದ ಸಾಲ ಮತ್ತು ಸಹಾಯಧನ ಫಲಾನುಭವಿಗಳಿಗೆ ಸಂದಾಯವಾಗಿದೆಯೇ? (ವಿವರ ನೀಡುವುದು)

----

15/4/864

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಭಿವೃದ್ಧಿ ಕಾಮಗಾರಿಗಳು**

**1293 ಅಮೀನಪ್ಪ ಗೌಡ ಎಸ್ ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ವಿಜಯಪುರ ಜಿಲ್ಲೆ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದಲ್ಲಿ ತಾಳಿಕೋಟಿ ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ಮುದ್ದೇಬಿಹಾಳ, ನಾಲತವಾಡ ಉಪ ಮಾರುಕಟ್ಟೆಗಳಿಗೆ ಕೃಷಿ ಮಾರುಕಟ್ಟೆ ಇಲಾಖೆ ಮತ್ತು ಮಂಡಳಿಯಿಂದ 2018-19 ಹಾಗೂ 2019-20 ನೇ ಸಾಲಿನಲ್ಲಿ (ಎಸ್ ಸಿ ಪಿ ಮತ್ತು ಟಿ ಎಸ್ ಪಿ ಸೇರಿ) ಸಾಮಾನ್ಯ ವಿಶೇಷ ಇತ್ಯಾದಿ ಸೇರಿ ಯಾವ ಯಾವ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಅನುದಾನ ಮಂಜೂರಾತಿ ದೊರೆತಿದೆ; (ಅಂಕಿ ಅಂಶ ಸಮೇತ ಕಾಮಗಾರಿ ಹೆಸರಿನೊಂದಿಗೆ ನೀಡಿರುವ ಅನುದಾನದ ಬಗ್ಗೆ ಹಾಗೂ ಪ್ರಯೋಜನ ಪಡೆದವರಲ್ಲಿ ವೈಯಕ್ತಿಕ ಫಲಾನುಭವಿಗಳಿದ್ದಲ್ಲಿ ಫಲಾನುಭವಿಗಳ ಹೆಸರು ಸಮೇತ ವಿಳಾಸದೊಂದಿಗೆ ಮಾಹಿತಿ ಒದಗಿಸುವುದು)
ಆ) 2018-19 ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ; (ಕಾಮಗಾರಿ ಹೆಸರು, ಗುತ್ತಿಗೆದಾರರ ಹೆಸರು ಸಮೇತ ಸಂಪೂರ್ಣ ವಿವರ ನೀಡುವುದು)

----

15/4/1482

**ಕೃಷಿ ಪತ್ತಿನ ಸಹಕಾರಿ ಸಂಘಗಳು**

**1294 ಪಿ ರಾಜೀವ್ (ಕುಡುಚಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕುಡಚಿ ಮತಕ್ಷೇತ್ರದಲ್ಲಿರುವ ಕೃಷಿ ಪತ್ತಿನ ಸಹಕಾರಿ ಸಂಘಗಳು ಹಾಗೂ ಸದಸ್ಯರುಗಳ ಸಂಖ್ಯೆ ಎಷ್ಟು;
ಆ) ಇಲ್ಲಿಯವರೆಗೆ ಪ್ರತಿ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಸಾಲ ಮನ್ನಾ ಯೋಜನೆಯಡಿಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ; (ವರ್ಷ, ಫಲಾನುಭವಿಯ ಹೆಸರು ಹಾಗೂ ಮನ್ನಾ ಮಾಡಲಾದ ಸಾಲದ ಮೊತ್ತದ ವಿವರ ತಿಳಿಸುವುದು)
ಇ) ಸಾಲಮನ್ನಾ ಯೋಜನೆಯಡಿಯಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳಿಗೆ ಹಣ ಬಿಡುಗಡೆಯಾದರೂ ಸಹ ಫಲಾನುಭವಿಗಳಿಗೆ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಸಹಕಾರಿ ಸಂಘದ ಪದಾಧಿಕಾರಿಗಳು ಹಣ ನೀಡದೆ ದುರುಪಯೋಗಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಉ) ಈ ಕುರಿತಂತೆ ರಾಜ್ಯದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ? (ವಿವರ ನೀಡುವುದು)

----

15/4/1484

**ಸಾಲ ಮನ್ನಾ ಫಲಾನುಭವಿಗಳು**

**1295 ರಾಜೇಶ್ ನಾಯಕ್ ಯು. (ಬಂಟ್ವಾಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸರ್ಕಾರದ ಸಲಾ ಮನ್ನಾ ಯೋಜನೆಯಿಂದ ಸಹಕಾರಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು;ಸಾಲದ ಮೊತ್ತವೆಷ್ಟು;
ಆ) ಸಾಲ ಮನ್ನಾ ಯೋಜನೆಗೆ ದಕ್ಷಿಣಕನ್ನಡ ಜಿಲ್ಲೆಗೆ ಸರ್ಕಾರ ನೀಡಬೇಕಾದ ಮೊತ್ತವೆಷ್ಟು ಹಾಗೂ ಈ ಯೋಜನೆಗೆ ಈವರೆಗೆ ನೀಡಿರುವ ಹಣವೆಷ್ಟು?

----

15/4/866

**ಕೊಳವೆ ಬಾವಿಗಳು**

**1296 ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ನಿಗಮಗಳ ಮೂಲಕ ನೀಡುವ ಯೋಜನೆಗಳಾವುವು; ಇಲಾಖೆಗೆ ಒಳಪಡುವ ನಿಗಮಗಳಾವುವು; ಎಲ್ಲಾ ನಿಗಮಗಳಿಂದ ನೀಡುವ ಯೋಜನೆಗಳ ಹೆಸರು ಮತ್ತು ಯಾವ ನಿಗಮದಿಂದ ಯಾವ ಯೋಜನೆಗಳನ್ನು ನೀಡಲಾಗುವುದು; (ಸಂಪೂರ್ಣ ವಿವರ ನೀಡುವುದು);
ಆ) 2017-18ರ ಡಿಸೆಂಬರ್‌ವರೆಗೆ ರಾಜ್ಯದಲ್ಲಿ ಮಂಜೂರಾತಿ ನೀಡಲಾದ ಡಾ:ಬಿ.ಆರ್.ಅಂಬೇಡ್ಕರ್ ಭವನ ಮತ್ತು ಬಾಬು ಜಗಜೀವನರಾವ್ ಭವನ ಹಾಗೂ ವಾಲ್ಮೀಕಿ ಭವನ ಹಾಗೂ ಬಂಜಾರ ಭವನಗಳ ಸಂಖ್ಯೆ ಎಷ್ಟು;

(ವಿವರ ನೀಡುವುದು)
ಇ) ಸಮಾಜ ಕಲ್ಯಾಣ ಇಲಾಖೆಯಿಂದ 2017ನೇ ಸಾಲಿನಿಂದ ಇದುವರೆಗೂ ರಾಜ್ಯದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಕೊಳವೆ ಬಾವಿಗಳಿಗೆ ಬೇಡಿಕೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು; ಹೆಚ್ಚುವರಿ ಕೊಳವೆ ಬಾವಿಗಳನ್ನು ಯಾವಾಗ ಕೊರೆಸಲಾಗುವುದು; ಯಾವ ಯಾವ ನಿಗಮಗಳಿಂದ ಎಷ್ಟು ಕೊಳವೆಬಾವಿಗಳನ್ನು ಕೊರೆಸಲಾಗುವುದು; (ವಿವರ ನೀಡುವುದು)
ಈ) ಸಮಾಜ ಕಲ್ಯಾಣ ಇಲಾಖೆಯಿಂದ ಕೊಳವೆ ಬಾವಿಗಳನ್ನು ಪಡೆದಫಲಾನುಭವಿಗಳಿಗೆ ಸಲಕರಣೆಗಳನ್ನು ನೀಡಿ ಎಷ್ಟು ಜನರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ; ಈ ಯೋಜನೆಗಳನ್ನು ಎಜೆನ್ಸಿಗೆ ನೀಡಲು ವಿಧಿಸುವ ಷರತ್ತುಗಳು ಹಾಗೂ ನಿಬಂಧನೆಗಳೇನು? (ವಿವರ ನೀಡುವುದು)

----

15/4/867

**ರೈತರ ಸಾಲಮನ್ನಾ**

**1297 ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಸಾಲ ಮನ್ನಾ ಯೋಜನೆಯಡಿಯಲ್ಲಿ ಸಿಬ್ಬಂದಿಗಳು ರೈತರ ಖಾತೆಗೆ ಹಣ ಜಮೆ ಮಾಡದೆ ಅಕ್ರಮವಾಗಿ ಸ್ವಂತಕ್ಕೆ ಬಳಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಪ್ರಕರಣ ಬೆಳಕಿಗೆ ಬಂದಿರುವುದು ಹಾಗೂ ನಡೆದಿರುವುದು ಎಲ್ಲಿ; (ವಿವರಗಳನ್ನು ಒದಗಿಸುವುದು)
ಇ) ಸಾಲ ಮನ್ನಾದಿಂದ ಬಂದಿರುವ ಹಣವನ್ನು ರೈತರ ಖಾತೆಗೆ ನೇರವಾಗಿ ಜಮಾ ಮಾಡುತ್ತಿದ್ದರೂ ಆ ಹಣವನ್ನು ಸ್ವಂತಕ್ಕೆ ಎಂದು ನಮೂದಿಸಿ ಅಕ್ರಮವಾಗಿ ಹಣ ವರ್ಗಾವಣೆ ಮಾಡಿಕೊಂಡಿರುವ ಬ್ಯಾಂಕ್‌ಗಳ/ ಸಿಬ್ಬಂದಿಗಳ ಮೇಲೆ ಕೈಗೊಂಡಿರುವ| ಕ್ರಮಗಳೇನು;
ಈ) ಇದನ್ನು ತಡೆಗಟ್ಟಲು ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ;
ಉ) ರೈತರ ಸಾಲ ಮನ್ನಾ ಯೋಜನೆಯಲ್ಲಿ ತಪ್ಪು ಮಾಹಿತಿ ನೀಡಿದವರ ವಿರುದ್ಧ ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)

----

15/4/1431

**ಪ್ರವಾಸೋದ್ಯಮ ಇಲಾಖೆಯ ಅನುದಾನ ಮತ್ತು ಅನುಷ್ಠಾನ**

**1298 ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಗೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಅನುದಾನವೆಷ್ಟು;
ಆ) ಅನುದಾನ ಹಂಚಿಕೆ ಮಾಡುವಾಗ ಕೋಲಾರ ಜಿಲ್ಲೆಗೆ ಇಲಾಖೆಯ ವಿವಿಧ ಯೋಜನೆಗಳಲ್ಲಿ ಹಂಚಿಕೆ ಮಾಡಲಾದ ಅನುದಾನವೆಷ್ಟು ಮತ್ತು ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳಾವುವು; (ವಿವರ ನೀಡುವುದು)

ಇ) 201920ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಗ್ರಾಮದ (ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ ಅವರ ಮೂಲ ಸ್ಥಳ) ಅಭಿವೃದ್ಧಿಗಾಗಿ ಅನುದಾನ ಕೋರಿ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿಗಳನ್ನು ಒದಗಿಸುವುದು)

----

15/4/1432

**ಕೃಷಿ ಹೊಂಡಗಳ ನಿರ್ಮಾಣ**

**1299 ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ ನಿಗದಿಪಡಿಸಿದ ಅನುದಾನವೆಷ್ಟು ಮತ್ತು ಭೌತಿಕ ಗುರಿ ಎಷ್ಟು;
ಆ) ಭೌತಿಕ ಗುರಿಗಿಂತ ಹೆಚ್ಚಾಗಿ ಬೇಡಿಕೆ ಬಂದ ರೈತರ ಅರ್ಜಿಗಳಿಗೆ ಪರಿಹಾರವನ್ನು ನೀಡಲಾಗಿದೆಯೇ; (ಸಂಪೂರ್ಣ ವಿವರಗಳನ್ನು ನೀಡುವುದು)
ಇ) ರೈತರ ಜೀವನೋಪಾಯಕ್ಕೆ (ಸಣ್ಣ ಬೆಳೆಗಾರರಿಗೆ) ಅನುಕೂಲವಾಗುವಂತಹ ಯೋಜನೆಗೆ ಹೆಚ್ಚುವರಿ ಅನುದಾನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

----

15/4/1374

**ಪ್ರವಾಸಿ ತಾಣಗಳ ಅಭಿವೃದ್ಧಿ**

**1300 ಸಿದ್ದು ಸವದಿ (ತೇರದಾಳ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಪ್ರವಾಸೋದ್ಯಮ ಇಲಾಖೆಯಿಂದ ಎಷ್ಟು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗಿದೆ; ಯಾವ ಯಾವ ಸೌಲಭ್ಯವನ್ನು ಇಲಾಖೆಯಿಂದ ಒದಗಿಸಲಾಗುವುದು; (ಪೂರ್ಣ ಮಾಹಿತಿ ನೀಡುವುದು)
ಆ) 201819 ಹಾಗೂ 201920ರಲ್ಲಿ ಇಲಾಖೆಗೆ ಬಿಡುಗಡೆಯಾದ ಅನುದಾನ ಹಾಗೂ ಮಂಜೂರು ಮಾಡಲಾದ ಮೊತ್ತವೆಷ್ಟು? (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ಒದಗಿಸುವುದು)

----

15/4/846

**ಪ್ರವಾಸಿ ತಾಣಗಳ ಅಭಿವೃದ್ಧಿ**

**1301 ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯ ಕಾರ್ಯಗಳಾವುವು (ವಿವರವಾದ ಮಾಹಿತಿಯನ್ನು ಒದಗಿಸುವುದು);

ಆ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರವಾಸಿ ತಾಣಗಳಾವುವು; ಅವುಗಳ ಅಭಿವೃದ್ಧಿಗೆ ಇಲಾಖಾವತಿಯಿಂದ ಕೈಗೊಂಡಿರುವ ಕ್ರಮಗಳೇನು (ವಿವರವಾದ ಮಾಹಿತಿಯನ್ನು ನೀಡುವುದು);
ಇ) ರಾಜ್ಯದ ಪ್ರಮುಖ ಪ್ರವಾಸಿ ತಾಣಗಳನ್ನು ಪರಿಸರ ಸ್ನೇಹಿ ತಾಣಗಳಾಗಿ ಮಾಡಲು ಕೈಗೊಂಡಿರುವ ಕ್ರಮಗಳೇನು (ವಿವರವಾದ ಮಾಹಿತಿಯನ್ನು ನೀಡುವುದು);
ಈ) ಪ್ರಸಿದ್ಧ ನಂದಿ ಗಿರಿಧಾಮವನ್ನು ಪರಿಸರ ಸ್ನೇಹಿ ಹಾಗೂ ವಿಶ್ವವಿಖ್ಯಾತಿ ಪ್ರವಾಸಿ ತಾಣವನ್ನಾಗಿಸಲು ಕೈಗೊಂಡಿರುವ ಕ್ರಮಗಳೇನು (ವಿವರವಾದ ಮಾಹಿತಿ ಒದಗಿಸುವುದು)?

----

15/4/847

## ಜಾನುವಾರುಗಳ ಗಣತಿ

1302 **ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯಾದ್ಯಂತ ಜಾನುವಾರುಗಳ ವರ್ಗವಾರು ಸಮೀಕ್ಷೆ ಮಾಡಲಾಗಿದೆಯೇ; ಎಷ್ಟು ವರ್ಷಗಳಿಗೊಮ್ಮೆ ಈ ಬಗ್ಗೆ ಗಣತಿ ನಡೆಸಲಾಗುತ್ತದೆ;
ಆ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಜಾನುವಾರು ಗಣತಿ ನಡೆದಿದೆಯೇ (ಗ್ರಾಮವಾರು ಅಂಕಿಅಂಶಗಳನ್ನು ನೀಡುವುದು);
ಇ) ಪಶುಭಾಗ್ಯ ಯೋಜನೆಯಡಿ ಪ್ರತಿ ಘಟಕಕ್ಕೆ ನೀಡುತ್ತಿರುವ ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಪಶುಭಾಗ್ಯ ಯೋಜನೆಯಡಿ ಹಸು, ಕರು, ಕುರಿ, ಮೇಕೆಗಳಿಗೆ ಪ್ರಸ್ತುತ ನೀಡುತ್ತಿರುವ ಘಟಕ ವೆಚ್ಚವೆಷ್ಟು (ಪ್ರತಿ ಘಟಕವಾರು ಮಾಹಿತಿ ಒದಗಿಸುವುದು);
ಈ) ಎಷ್ಟು ಜಾನುವಾರುಗಳಿಗೆ ಒಂದು ಪಶು ಚಿಕಿತ್ಸಾಲಯ ತೆರೆಯಲಾಗುತ್ತದೆ; ನಂದಿ ಹೋಬಳಿಯಲ್ಲಿ ಮತ್ತೊಂದು ಪಶು ಚಿಕಿತ್ಸಾಲಯ ತೆರೆಯಲು ಸರ್ಕಾರ ಕೈಗೊಂಡ ಕ್ರಮವೇನು?

----

15/4/848

## ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಗಳ ಭರ್ತಿ

1303 **ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿರುವ ಬಹುತೇಕ ಸ್ಥಳಗಳಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆ ಖಾಲಿಯಿರುವುದರಿಂದ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಚಿಕ್ಕಬಳ್ಳಾಪುರ ತಾಲ್ಲೂಕು ಕೇಂದ್ರಕ್ಕೆ ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆ ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;
ಆ) ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಆದಿಜಾಂಬವ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಶ್ರೀ ವಾಲ್ಮೀಕಿ ಅಭಿವೃದ್ಧಿ ನಿಗಮಗಳನ್ನು ಪ್ರತ್ಯೇಕವಾಗಿ ರಚಿಸಿರುವುದರ ಉದ್ದೇಶವೇನು; ಆಯಾ ನಿಗಮಗಳಲ್ಲಿ ಅಗತ್ಯವಾಗಿರುವ ವ್ಯವಸ್ಥಾಪಕರ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಗುಮಾಸ್ತ, ಅಧೀಕ್ಷಕ ಇತ್ಯಾದಿ ಹುದ್ದೆಗಳನ್ನು ತುಂಬಲಾಗಿದೆಯೇ;
ಇ) ಹಾಗಿದ್ದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಗತ್ಯ ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರ ಕೈಗೊಂಡಿರುವ

ಕ್ರಮಗಳೇನು (ವಿವರವಾದ ಮಾಹಿತಿಯನ್ನು ನೀಡುವುದು)

ಈ) ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂಬೇಡ್ಕರ್ ಭವನ, ಬಾಬು ಜಗಜೀವನರಾಮ್‌ಭವನಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ; 2019-20ನೇ ಸಾಲಿನಲ್ಲಿ ಎಷ್ಟು ಭವನಗಳನ್ನು ಮಂಜೂರು ಮಾಢಲಾಗುವುದು;(ವಿವರವಾದ ಮಾಹಿತಿಯನ್ನು ನೀಡುವುದು)

ಉ) ವಿವಿಧ ನಿಗಮಗಳಲ್ಲಿ ಸ್ವಯಂ ಉದ್ಯೋಗ, ನೇರಸಾಲ, ಸಮೃದ್ಧಿ, ಉದ್ಯಮಶೀಲತಾ, ಗಂಗಾಕಲ್ಯಾಣ ಇತ್ಯಾದಿ ಯೋಜನೆಗಳಲ್ಲಿ ಅತೀ ಹೆಚ್ಚು ಫಲಾನುಭವಿಗಳಿಗೆ ಯೋಜನೆ ದೊರೆಯುವಂತೆ ಗುರಿ ನೀಡಿದ್ದರೂ, 201819ನೇ ಸಾಲಿನ ಗುರಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) 2018-19 ನೇ ಸಾಲಿನಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ನೀಡಿರುವ ಯೋಜನೆವಾರು ಗುರಿಗಳ ವಿವರ ಒದಗಿಸುವುದು;

ಋ) ಅತೀ ಹೆಚ್ಚು ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಲು ಗುರಿ ಹೆಚ್ಚು ಮಾಡಲು ಕೈಗೊಂಡಿರುವ ಕ್ರಮಗಳೇನು? ಪ್ರಸ್ತುತ ವಿವಿಧ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆಯ ಸಾಲ ಪಾರದರ್ಶಕವಾಗಿ ದೊರೆಯಲು ಯಾವ ಕ್ರಮ ಕೈಗೊಳ್ಳಲಾಗುವುದು? (ವಿವರವಾದ ಮಾಹಿತಿಯನ್ನು ನೀಡುವುದು);

----

**15/4/1372**

**ಮತ್ಸ್ಯಾಶ್ರಯ ಮನೆಗಳು**

**1304 ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201718 ಮತ್ತು 201819ನೇ ಸಾಲಿನಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಮಂಜೂರಾದ ಮತ್ಸ್ಯಾಶ್ರಯ ಮನೆಗಳ ಸಂಖ್ಯೆ ಎಷ್ಟು;

ಆ) ಸದರಿ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ವಸತಿ ರಹಿತ ಮೀನುಗಾರರಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಇದ್ದಲ್ಲಿ, ಇವರಿಗೆ ಆಧ್ಯತೆ ಮೇಲೆ ಮನೆ ನಿರ್ಮಾಣಕ್ಕೆ ಕೈಗೊಂಡ ಕ್ರಮಗಳೇನು?

----

**15/4/1373**

**ತೋಟಗಾರಿಕಾ ಬಳೆಗಳ ಹಾನಿ**

**1305 ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ತೆಂಗು, ಅಡಿಕೆ ಹಾಗೂ ಇನ್ನಿತರ ತೋಟಗಾರಿಕಾ ಬೆಳಗಳು ಹಾಳಾಗಿರುವುದು ಸರ್ಕಾರದ ಗಮನಲ್ಲಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಪರಿಹಾರ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪ್ರಸ್ತುತ ಸಾಲಿನಲ್ಲಿ ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು)

----

**ಅಲ್ಪಾವಧಿ ಕೃಷಿ ಸಾಲ**

1306 **Sh. V SUNIL KUMAR (Karkal (122)):**

ಮಾನ್ಯ **Minister for Co-operation Department.** ದಿನಾಂಕ ಅ) 201718ನೇ ಸಾಲಿನಲ್ಲಿ ಶೂನ್ಯ ಬಡ್ಡಿದರದಲ್ಲಿ ರೂ. 3.00 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಎಷ್ಟು ಮಂದಿ ರೈತರಿಗೆ ನೀಡಲಾಗಿದೆ; (ತಾಲ್ಲೂಕುವಾರು ವಿವರ ಒದಗಿಸುವುದು)
ಆ) ಶೇ. 3ರ ಬಡ್ಡಿದರದಲ್ಲಿ ರೂ. 10.00 ಲಕ್ಷದವರೆಗಿನ ಮಧ್ಯಮಾವಧಿ ಕೃಷಿಸಾಲವನ್ನು ಎಷ್ಟು ಜನರಿಗೆ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)
ಇ) 201718ನೇ ಸಾಲಿನ ಕೃಷಿ ಸಾಲವನ್ನು ವಿತರಿಸುವ ಗುರಿಯನ್ನು ಆಯವ್ಯಯದಲ್ಲಿ ಘೋಷಿಸಿದ್ದು, ನಿಗದಿಪಡಿಸಿದ ಗುರಿ ತಲುಪಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು?

----

15/4/1442

**ಪ್ರವಾಸೋದ್ಯಮದ ವಿವಿಧ ಯೋಜನೆಗಳು**

1307 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಒತ್ತು ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ ಹಮ್ಮಿಕೊಂಡ ವಿವಿಧ ಯೋಜನೆಗಳು ಯಾವುವು; (ಸಂಪೂರ್ಣ ವಿವರಗಳನ್ನು ಒದಗಿಸುವುದು)
ಆ) ಪ್ರವಾಸೋದ್ಯಮಕ್ಕೆ ಒತ್ತು ನೀಡುವ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡ ಯೋಜನೆಯಡಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲು ಕಳೆದ 3 ವರ್ಷಗಳಿಂದ ಬಂದ ಪ್ರಸ್ತಾವನೆಗಳು ಎಷ್ಟು; ಹಾಗಿದ್ದಲ್ಲಿ, ಸಂಪೂರ್ಣ ವರದಿ ಸಿದ್ಧಪಡಿಸಿ ಎಷ್ಟು ಪ್ರಸ್ತಾವನೆಗಳನ್ನು ಕೇಂದ್ರಕ್ಕೆ ಸಲ್ಲಿಸಲಾಗಿದೆ; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)
ಇ) ಕಳೆದ 3 ವರ್ಷಗಳಿಂದ ಎಷ್ಟು ಕಾಮಗಾರಿಗಳಿಗೆ ಅನುಮೋದನೆ ದೊರಕಿದೆ; ಪ್ರಸ್ತುತ ಕಾಮಗಾರಿಗಳು ಯಾವ ಹಂತದಲ್ಲಿವೆ? (ಕಾಮಗಾರಿಗಳ ಹೆಸರು ಸಹಿತ ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)

----

15/4/1443

**ಅಡಿಕೆಗೆ ಕೊಳೆ ರೋಗ**

1308 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಬಾರಿ ಅಧಿಕವಾದ ಬಿಸಿಲಿನಿಂದಾಗಿ ಬಂದ ಕೊಳೆ ರೋಗದಿಂದ ಅಡಿಕೆ ಮತ್ತು ತೆಂಗಿನ ತೋಟಗಳಿಗೆ ಹಾನಿಯಾಗಿದ್ದು, ಇದಕ್ಕೆ ಪರಿಹಾರ ನೀಡುವಲ್ಲಿ ಇಲಾಖೆ ಕೈಗೊಂಡ ಕ್ರಮಗಳೇನು;
ಆ) ಬಿಸಿಲಿನಿಂದ ಹಾಗೂ ಕೊಳೆ ರೋಗದಿಂದ ಹಾನಿಯಾದ ಎಷ್ಟು ಎಕರೆ ತೋಟವನ್ನು ಗುರುತಿಸಲಾಗಿದೆ; (ತಾಲ್ಲೂಕುವಾರು ವಿಸ್ತೀರ್ಣ ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು)

ಇ) ತೋಟಗಳ ಹಾನಿಯಿಂದ ನಷ್ಟ ಅನುಭವಿಸಿರುವ ಎಷ್ಟು ಮಂದಿ ರೈತರನ್ನು ಗುರುತಿಸಲಾಗಿದೆ ಹಾಗೂ ಅವರುಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು)

----

15/4/1444

**ಪ್ರಾಥಮಿಕ ಕೃಷಿ ಸಹಕಾರ ಸಂಘ**

1309 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಸಹಕಾರ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿರುವ ಎಷ್ಟು ಗ್ರಾಮ ಪಂಚಾಯತ್‌ಗಳಲ್ಲಿ ಆರ್ಥಿಕವಾಗಿ ಕಾರ್ಯಸಾಧುವೆನಿಸುವ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)
ಆ) ಸದರಿ ಸಂಘದ ಕಾರ್ಯವ್ಯಾಪ್ತಿಯೇನು; ಇದರ ಉದ್ದೇಶಗಳು ಮತ್ತು ರೈತರಿಗೆ ನೀಡಲಾದ ಸವಲತ್ತುಗಳೇನು; (ಸಂಪೂರ್ಣ ವಿವರಗಳನ್ನು ಒದಗಿಸುವುದು)
ಇ) ಹಾಗಿದ್ದಲ್ಲಿ, ಪ್ರಾಥಮಿಕ ಕೃಷಿ ಸಹಕಾರಿ ಸಂಘದ ಬಗ್ಗೆ ಜನಸಾಮಾನ್ಯರಿಗೆ ಮಾಹಿತಿ ನೀಡಿ ಒಗ್ಗೂಡಿಸುವ ಜವಾಬ್ದಾರಿಯನ್ನು ಯಾವ ಇಲಾಖೆ ನಿರ್ವಹಿಸುತ್ತದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು)

----

15/4/1355

**ಅರಣ್ಯ ಭೂಮಿ ನೀಡಿಕೆ**

1310 **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ವಾಸಿಸಿಕೊಂಡು ಬಂದಿರುವ ಬುಡಕಟ್ಟು ಸಮುದಾಯಗಳಿಗೆ ಅರಣ್ಯ ಭೂಮಿ ವರ್ಗಾವಣೆ ಮಾಡುವ ಕುರಿತಾದ ಕಾನೂನು ನೀತಿ ನಿಯಮಗಳಾವುವು (ವಿವರ ನೀಡುವುದು);
ಆ) ಕಳೆದ ಮೂರು ವರ್ಷಗಳಿಂದ ಅರಣ್ಯ ಹಕ್ಕು ಕಾಯ್ದೆ ಪ್ರಕಾರ ರಾಜ್ಯದಲ್ಲಿ ಎಷ್ಟು ಬುಡಕಟ್ಟು ಸಮುದಾಯಗಳವರಿಗೆ ಅರಣ್ಯ ಭೂಮಿ ವರ್ಗಾವಣೆ ಮಾಡಲಾಗಿರುತ್ತದೆ; ಅವು ಯಾವುವು (ವಿವರ ನೀಡುವುದು)
ಇ) ಕರಾವಳಿ ಜಿಲ್ಲೆಗಳ ಅರಣ್ಯ ಪ್ರದೇಶದ ಬುಡಕಟ್ಟು ಕುಟುಂಬಗಳಿಗೆ ಅರಣ್ಯ ಭೂಮಿ ವರ್ಗಾವಣೆ ಮಾಡಿದ ಹಾಗೂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

----

15/4/1210

**ತೋಟಗಾರಿಕೆ ಯೋಜನೆಗಳು**

1311 **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ತೋಟಗಾರಿಕೆ ಉತ್ತೇಜನಕ್ಕಾಗಿ ಯಾವ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ;

ಆ) ತೋಟಗಾರಿಕೆ ಯೋಜನೆಗಳಿಗಾಗಿ ಸರ್ಕಾರ 201819 ಮತ್ತು 201920ನೇ ಸಾಲಿನಲ್ಲಿ ಹಂಚಿಕೆ ಮಾಡಿದ ಅನುದಾನನೆಷ್ಟು; ಈ ಪೈಕಿ ಬಿಡುಗಡೆ ಮಾಡಿದ ಅನುದಾನವೆಷ್ಟು;( ಯೋಜನೆವಾರು ವಿವರ ನೀಡುವುದು)
ಇ) ಹುಕ್ಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಗಳಡಿ ಎಷ್ಟು ರೈತರಿಂದ ಸಹಾಯ ಧನಕ್ಕಾಗಿ ಬೇಡಿಕೆ ಇರುತ್ತದೆ; ಎಷ್ಟು ಫಲಾನುಭವಿಗಳಿಗೆ ಯೋಜನೆಗಳ ಲಾಭ ಒದಗಿಸಲಾಗದೆ;ಇನ್ನೂ ಎಷ್ಟು ರೈತರಿಗೆ ಒದಗಿಸುವುದು ಬಾಕಿ ಇದೆ;( ಯೋಜನವಾರು ವಿವರ ನೀಡುವುದು)
ಈ) ಬಾಕಿ ಉಳಿದಿರುವ ಪ್ರಕರಣಗಳಲ್ಲಿ ಯಾವಾಗ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ?

----

15/4/1211

**ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಅನುದಾನ**

**1312 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಯೋಜನೆಯಡಿ ಯಾವ ಯಾವ ಉದ್ದೇಶಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ;
ಆ) ಸದರಿ ಅನುದಾನದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು; ಅನುದಾನ ಬಿಡುಗಡೆಗೆ ಅನುಸರಿಸುತ್ತಿರುವ ಮಾನದಂಡಗಳೇನು;
ಇ) 201819 ಮತ್ತು 201920ನೇ ಸಾಲುಗಳಲ್ಲಿ ಈ ಯೋಜನೆಯಡಿ ಬಿಡುಗಡೆ ಮಾಡಿದ ಹಾಗೂ ಖರ್ಚಾದ ಅನುದಾನವೆಷ್ಟು?( ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

----

15/4/1212

**ಮಾರ್ಕಂಡೇಯ ಜಲಾಶಯ ಪ್ರಾವಾಸಿ ತಾಣ**

**1313 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆಯ ಮಾರ್ಕಂಡೇಯ ಜಲಾಶಯದ ಹಿನ್ನೀರಿನ ನಡುಗಡ್ಡೆಯನ್ನು ಪ್ರಾವಾಸಿ ತಾಣವನ್ನಾಗಿ ಮಾರ್ಪಡಿಸಲು ಹಾಗೂ ಅಲ್ಲಿ ತಂಗಲು ಸರ್ಕಾರದಿಂದ ವಸತಿ ರೆಸಾರ್ಟ್ ನಿರ್ಮಾಣ ಮಾಡಲು ಮತ್ತು ಬೋಂಟಿಗ್ ವ್ಯವಸ್ಥೆ ಕಲ್ಪಿಸಲು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೇ;
ಆ) ಹಾಗಿದ್ದಲ್ಲಿ,ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

15/4/1213

**ಐತಿಹಾಸಿಕ ತಾಣಗಳ ಅಭಿವೃದ್ಧಿ**

**1314 ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯುಳ್ಳ ಕಿತ್ತೂರು ಕೋಟೆ, ನಂದಗಡ ಮತ್ತು ಯಳ್ಳೂರಿನಲ್ಲಿರುವ ರಾಜಹಂಸಗಡ ಕೋಟೆಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣಗಳನ್ನಾಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಈ ಸ್ಥಳಗಳ ಅಭಿವೃದ್ಧಿಗೆ ಸರ್ಕಾರ ಈವರೆಗೆ ಮಾಡಿರುವ ವೆಚ್ಚವೆಷ್ಟು;

ಇ) ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರ ಆಯವ್ಯಯದಲ್ಲಿ ಕಾಯ್ದಿರಿಸಿದ ಹಾಗೂ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;

ಈ) ಸದರಿ ಪ್ರಾಧಿಕಾರದ ಮೂಲಕ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?( ಸಂಪೂರ್ಣ ವಿವರ ನೀಡುವುದು)

----

15/4/1214

**ಹೈನುಗಾರಿಕೆಗೆ ಸಹಾಯಧನ**

1315 **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಪಶುಪಾಲನೆ ಇಲಾಖೆಯಿಂದ ರೈತರಿಗೆ ಹೈನುಗಾರಿಕೆಗಾಗಿ ಎಮ್ಮೆ ಮತ್ತು ರಾಸುಗಳನ್ನು ಖರೀದಿಸಲು ಸಹಾಯಧನ ಮಂಜೂರು ಮಾಡಲಾಗುತ್ತಿದೆಯೇ;

ಆ) ಮಾಡುತ್ತಿದ್ದಲ್ಲಿ, ಇದಕ್ಕಾಗಿ ಅನುಸರಿಸುತ್ತಿರುವ ಮಾನದಂಡಗಳೇನು;

ಇ) ಈ ಯೋಜನೆಯಡಿ ಹುಕ್ಕೇರಿ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ರೈತರಿಗೆ ಸಹಾಯಧನ ನೀಡಲು ಗುರಿ ನಿಗಧಿಪಡಿಸಲಾಗಿದೆ ಮತ್ತು ರೈತರಿಂದ ಎಷ್ಟು ಅರ್ಜಿಗಳು ಬಂದಿವೆ;

ಈ) ಕಡಿಮೆ ಗುರಿ ನೀಡಿದ್ದರಿಂದ, ರೈತರಿಗೆ ಸೂಕ್ತ ಸಹಾಯಧನ ಸಿಗದೇ ರೈತರು ಸಂಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಹೆಚ್ಚಿನ ಗುರಿ ಕಲ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಕೊಳ್ಳಲು ಉದ್ದೇಶಿಸಿದೆ?

----

15/4/1476

**ಕೃಷಿ ಮತ್ತು ಡಿಪ್ಲೋಮಾ ತೋಟಗಾರಿಕೆ ವೃತ್ತಿಪರ ಕೋರ್ಸ್‌ಗಳು**

1316 **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ಕೃಷಿ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಇಂಡಿ ಪಟ್ಟಣದಲ್ಲಿರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಮತ್ತು ಡಿಪ್ಲೋಮೋ ತೋಟಗಾರಿಕೆ ವೃತ್ತಿಪರ ಕೋರ್ಸ್‌ಗಳು ಇಲ್ಲದಿರುವುದರಿಂದ ಸದರಿ ವಿಷಯಗಳಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸದರಿ ವೃತ್ತಿಪರ ಕೋರ್ಸ್‌ಗಳನ್ನು ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಪ್ರಾರಂಭಿಸುವ ಬಗ್ಗೆ ಸರ್ಕಾರದ ನಿಲುವೇನು;

ಇ) ಸದರಿ ವೃತ್ತಿಪರ ಕೋರ್ಸ್‌ಗಳನ್ನು ಕೃಷಿ ವಿಜ್ಞಾನ ಕೇಂದ್ರ ಹೊಂದಿರುವ ಇಂಡಿ ಪಟ್ಟಣದಲ್ಲಿ ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು; ಈ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು)

----

15/4/1477

## ಲಿಂಬೆಗೆ ಭೌಗೋಳಿಕನ ಗುರುತು

1317 **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯಲ್ಲಿ ಯಾವ ಯಾವ ವಸ್ತು ಅಥವಾ ಪದಾರ್ಥಗಳಿಗೆ ಜಿಯೋಗ್ರಫಿಕಲ್ ಐಡೆಂಟಿಫಿಕೇಷನ್ ಗುರುತು (GI) ನೀಡಲಾಗಿದೆ; (ವಿವರ ನೀಡುವುದು)
ಆ) ಇಂಡಿ ತಾಲ್ಲೂಕಿನಲ್ಲಿ ಬೆಳೆಯುವ ಲಿಂಬೆ ಹಣ್ಣು ವಿಶೇಷ ಗುಣದಿಂದ ಕೂಡಿದ್ದು, ಇಲ್ಲಿ ಬೆಳೆಯುವ ಲಿಂಬೆಯು ಅಂತರ್‌ರಾಜ್ಯ ಮತ್ತು ವಿದೇಶಗಳಿಗೆ ರಫ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಸದರಿ ಲಿಂಬೆಹಣ್ಣಿಗೆ ಜಿಯೋಗ್ರಫಿಕಲ್ ಐಡೆಂಟಿಫಿಕೇಷನ್ ಗುರುತು ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೇ;
ಈ) ಹಾಗಿದ್ದಲ್ಲಿ, ಸದರಿ ಗುರುತು ದೊರಕಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;
ಉ) ಹೊಂದಿದ್ದಲ್ಲಿ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಅದಕ್ಕಾಗಿ ಯಾವ ಯಾವ ಪ್ರಕ್ರಿಯೆಗಳು ಜರುಗಿವೆ; ಬಾಕಿ ಇರುವ ಪ್ರಕ್ರಿಯೆಗಳು ಯಾವುವು;
ಊ) ಯಾವಾಗ ಜಿಯೋಗ್ರಫಿಕಲ್ ಐಡೆಂಟಿಫಿಕೇಷನ್ ಗುರುತು ದೊರಕಿಸಲಾಗುವುದು; ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

\- - - -

15/4/1478

## ಲಿಂಬೆ ಅಭಿವೃದ್ಧಿ

1318 **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ತೋಟಗಾರಿಕೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಇಂಡಿ ಪಟ್ಟಣದಲ್ಲಿರುವ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಗೆ ಸೂಕ್ತ ಜಮೀನು, ಸಿಬ್ಬಂದಿ, ಶೀತಘಲಗೃಹ, ಮಾರುಕಟ್ಟೆ ಯಾರ್ಡ್, ಗೋದಾಮು, ಖರೀದಿ ಕೇಂದ್ರ, ಆವರ್ತನಿಧಿ, ತರಬೇತಿ ಕೇಂದ್ರ ಮೊದಲಾದ ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಶೀತಘಲಗೃಹ ನಿರ್ಮಾಣ ಗೋದಾಮು ನಿರ್ಮಾಣ ಮಾರುಕಟ್ಟೆ, ತರಬೇತಿ ಕೇಂದ್ರ, ಪ್ರಯೋಗಶಾಲೆ ಮೊದಲಾದವುಗಳಿಗೆ ಸೂಕ್ತ ಕಟ್ಟಡ ನಿರ್ಮಾಣ ಮಾಡಲು ಅವಶ್ಯಕವಾದ ಜಮೀನು ಒದಗಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;
ಇ) ಬೆಲೆ ಕುಸಿತವಾದಾಗ ಖರೀದಿ ಕೇಂದ್ರ (ಆವರ್ತನಿಧಿ)ಕ್ಕೆ ಎಷ್ಟು ಅನುದಾನ ಮೀಸಲಿರಿಸಲಾಗುವುದು ಹಾಗೂ ಯಾವಾಗ ಜಾರಿಗೆ ಬರುತ್ತದೆ;
ಈ) ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

\- - - -

15/4/1479

## ಹಿಂದುಳಿದ ವರ್ಗಗಳ ಪಟ್ಟಿ

1319 **ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ಸಮಾಜ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕೇಂದ್ರ ಸರ್ಕಾರವು ಹಿಂದುಳಿದ ವರ್ಗಗಳ (ಒ.ಬಿ.ಸಿ) ಪಟ್ಟಿಯಲ್ಲಿ ವೀರಶೈವಲಿಂಗಾಯತ ಜಾತಿ ಮತ್ತು ಉಪ ಜಾತಿಗಳ ಹೆಸರುಗಳು ಇಲ್ಲದಿರುವುದರಿಂದ ಹಿಂದುಳಿದ ವರ್ಗಕ್ಕೆ ಸೇರಿದ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ರಾಜ್ಯ ಸರ್ಕಾರವು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ವೀರಶೈವ ಲಿಂಗಾಯತ ಜಾತಿಯನ್ನು ಸೇರ್ಪಡಿಸಲು ಶಿಫಾರಸ್ಸು ಮಾಡಲು ಆಸಕ್ತಿ ಹೊಂದಿದೆಯೇ;

ಇ) ಹೊಂದಿದ್ದಲ್ಲಿ, ಯಾವಾಗ ಶಿಫಾರಸ್ಸು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

----

15/4/1480

## ವೀರಶೈವಲಿಂಗಾಯತ ಅಭಿವೃದ್ಧಿ ನಿಗಮ

**1320 ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ):**

ಮಾನ್ಯ **ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ವೀರಶೈವಲಿಂಗಾಯತ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿದ್ದು, ಸದರಿ ಜನಾಂಗದವರಿಗೆ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ದೊರೆಯಬೇಕಾದ ಸರ್ಕಾರದ ವಿವಿಧ ಸೌಲಭ್ಯಗಳು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ವಿವಿಧ ಜಾತಿ, ಧರ್ಮಗಳ ಅಭಿವೃದ್ಧಿ ನಿಗಮಗಳಿರುವಂತೆಯೇ ಸದರಿ ಜನಾಂಗದವರಿಗೆ ಅನುಕೂಲವಾಗುವಂತೆ ಪ್ರತ್ಯೇಕ ವೀರಶೈವಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;

ಇ) ಹೊಂದಿದ್ದಲ್ಲಿ, ಯಾವಾಗ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

----

**ಬೆಂಗಳೂರು - 560001.** **ಎಂ.ಕೆ. ವಿಶಾಲಾಕ್ಷಿ,**
**ಗುರುವಾರ, 26ನೇ ಜುಲೈ, 2019.** **ಕಾರ್ಯದರ್ಶಿ (ಪ್ರ)**